ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೫೮	ಬೆಂಗಳೂರು, ಬುಧವಾರ, ೦೪, ಅಕ್ಟೋಬರ್, ೨೦೨೩(ಆಶ್ವಯುಜ, ೧೨, ಶಕವರ್ಷ, ೧೯೪೫)	ಸಂಚಿಕೆ ೧೯೧
Volume 158	BENGALURU, WEDNESDAY, 04, OCTOBER, 2023(AASHWAYUJA , 12, SHAKAVARSHA, 1945)	Issue 191

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ ಜಿಲ್ಲೆ - 562101

OFFICE OF THE DEPUTY COMMISSIONER, ZILLADALITHA BHAVANA, SHIDLAGHATTA ROAD, CHIKKABALLAPURA DISTRICT - 562101 (KARNATAKA)

ಸಂ: ಎಮ್.ಐ.ಎನ್/ಸಿ.ಆರ್/ಕ್ರಷರ್ ಅಧಿಸೂಚನೆ-02/2023-24 ದಿನಾಂಕ:-05/09/2023

: ಅಧಿಸೂಚನೆ :

ವಿಷಯ:- ಕರ್ನಾಟಕ ಕಲ್ಲುಪುಡಿ ಘಟಕಗಳ ನಿಯಂತ್ರಣ ಅಧಿನಿಯಮ 2011 ಹಾಗೂ (ತಿದ್ದುಪಡಿ) ಕಾಯ್ದೆ 2012, 2013, 2014, 2020 ಮತ್ತು 2021 ರನ್ವಯ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಲ್ಲುಪುಡಿ ಘಟಕಗಳ ಸ್ಥಾಪನೆ ಮಾಡುವ ಪ್ರದೇಶವನ್ನು ಸುರಕ್ಷಿತ ವಲಯವನ್ನಾಗಿ ಘೋಷಣೆ ಮಾಡುವ ಕುರಿತು.

ಉಲ್ಲೇಖ:- ದಿನಾಂಕ :-09/06/2023 ರಂದು ನಡೆದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸಭೆಯ ನಡವಳಿಯಂತೆ

@@@@@@

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್) ನಿಯಂತ್ರಣ ಅಧಿನಿಯಮ 2011 ಹಾಗೂ (ತಿದ್ದುಪಡಿ) ಕಾಯ್ದೆ 2012, 2013, 2014, 2020 ಮತ್ತು 2021 ರ ಕಲಂ 3(1) ರಂತೆ ನಮೂನೆ 'ಎ' ಮತ್ತು 'ಎ1' ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಕಲಂ 6(3) ರಂತೆ ಕಂದಾಯ, ಅರಣ್ಯ, ಪರಿಸರ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳಿಂದ ಜಂಟಿ ಸ್ಥಳ ತಪಾಸಣೆಯನ್ನು ಮಾಡಲಾಗಿರುತ್ತದೆ. ಕಲಂ 6(1) ರಂತೆ ಸುರಕ್ಷಿತ ವಲಯವನ್ನಾಗಿ ಘೋಷಿಸಲು ನಿಗಧಿಪಡಿಸಿರುವ ಮಾನದಂಡ/ ಷರತ್ತುಗಳನ್ನು ಪೂರೈಸುತ್ತಿರುವ ಅರ್ಜಿಗಳನ್ನು ಉಲ್ಲೇಖದಂತೆ ದಿನಾಂಕ :-09/06/2023 ರಂದು ನಡೆದ ಜಿಲ್ಲಾಕಲ್ಲು ಪುಡಿ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯ ನಡವಳಿಯಂತೆ ಸುರಕ್ಷಿತ ವಲಯವೆಂದು ಘೋಷಿಸಿ, ಅಧಿಸೂಚನೆಯನ್ನು ಹೊರಡಿಸಿ, ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ 2011 ಹಾಗೂ (ತಿದ್ದುಪಡಿ) ಕಾಯ್ದೆ 2012, 2013, 2014, 2020 ಮತ್ತು 2021 ರ ಕಲಂ 6(3) ಮತ್ತು ನಿಯಮಾವಳಿ 2014 ರ ನಿಯಮ 3(2)

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ರನ್ವಯ ಕಲ್ಲುಪುಡಿ ಮಾಡುವ ಘಟಕವನ್ನು ಸ್ಥಾಪನೆ ಮಾಡಲು ಈ ಕೆಳಕಂಡ ಪ್ರದೇಶಗಳನ್ನು ಸುರಕ್ಷಿತ ವಲಯಗಳೆಂದು ಈ ಮೂಲಕ ಘೋಷಿಸಲಾಗಿದೆ.

ಕ್ರ.ಸಂ	ಕಲ್ಲುಪುಡಿ ಘಟಕದ / ಅರ್ಜಿದಾರರ ಹೆಸರು	ತಾಲ್ಲೂಕು	ಗ್ರಾಮ	ಸ.ನಂ	ವಿಸ್ತೀರ್ಣ	ಜಮೀನಿನ ವಿವರ		
01	ಮೆ		ಜೆಕೆಆರ್ ಸ್ಟೋನ್ ಕ್ರಷರ್ಸ್	ಗೌರಿಬಿದನೂರು	ಮಂಚೇನಹಳ್ಳಿ	188	5-00	ಸರ್ಕಾರಿ
02	ಮೆ		ಶ್ರೀ ಉಷಾ ಸ್ಟೋನ್ಸ್	ಗೌರಿಬಿದನೂರು	ಮಂಚೇನಹಳ್ಳಿ	188	2-00	ಸರ್ಕಾರಿ
03	ಮೆ		ಜಿ.ಟಿ.ಬಿ.ಗ್ರೂಪ್	ಚಿಂತಾಮಣಿ	ನರಸಾಪುರ	01	3-26	ಸರ್ಕಾರಿ
			ಕೋಟಗಲ್	11	2-08	ಸರ್ಕಾರಿ		
04	ಮೆ		ಹರೀಶ್ ಇನ್ ಫ್ರಾ ಪ್ರಾಜೆಕ್ಟ್ಸ್	ಗುಡಿಬಂಡೆ	ಗಂಗಾನಹಳ್ಳಿ	78	1-27	ಪಟ್ಟಾ
05	ಮೆ		ರ್ಯಾಂಕ್ ಸಿಲಿಕಾನ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್	ಗುಡಿಬಂಡೆ	ಸಿಂಗಾನಹಳ್ಳಿ	71/7 71/9	5-20	ಪಟ್ಟಾ
06	ಮೆ		ಜೆ.ಕೆ.ಸಪ್ಲೀಯ್ಸ್	ಚಿಕ್ಕಬಳ್ಳಾಪುರ	ರೆಡ್ಡಿಹಳ್ಳಿ	121 22	5-00 ಎಕರೆಗೆ ಸೀಮಿತ ಗೊಳಿಸಿದೆ	ಪಟ್ಟಾ

ಈ ಅಧಿಸೂಚನೆಯು ಅಸ್ತಿತ್ವದಲ್ಲಿರುವ ಕಂದಾಯ, ಅರಣ್ಯ, ಪರಿಸರ ಹಾಗೂ ಕರ್ನಾಟಕ ಕಲ್ಲುಪುಡಿ ಘಟಕಗಳ ಲೈಸೆನ್ಸಿಂಗ್ ಹಾಗೂ ನಿಯಂತ್ರಣ ಕಾಯ್ದೆಗಳ/ ನಿಯಮಗಳ ಷರತ್ತುಗಳಿಗೆ ಮತ್ತು ಸರ್ಕಾರದಿಂದ ಜಾರಿಯಾಗಿರುವ ಹಾಗೂ ಕಾಲಕಾಲಕ್ಕೆ ಜಾರಿಯಾಗುವ ಆದೇಶಗಳು, ಸುತ್ತೋಲೆಗಳಿಗೆ/ ಮಾರ್ಗಸೂಚಿಗಳಿಗೆ ಹಾಗೂ ನ್ಯಾಯಾಲಯಗಳ ಆದೇಶಗಳಿಗೆ ಮತ್ತು ಕ್ರಷರ್ ಘಟಕಗಳಿಗೆ ಸಂಬಂಧಿಸಿದಂತೆ ಜಾರಿಯಾಗುವ ಇತರೆ ಇಲಾಖೆಗಳ ಆದೇಶಗಳಿಗೆ ಒಳಪಟ್ಟಿದ್ದು, ಕಂದಾಯ/ ಅರಣ್ಯ ಇಲಾಖೆಗಳ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಯಾವುದೇ ರೀತಿಯ ಮುನ್ಸೂಚನೆಯನ್ನು ನೀಡದೆ ಅಧಿಸೂಚನೆಯನ್ನು ರದ್ದುಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.

ಸಹಿ/-
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಕಲ್ಲುಪುಡಿ ಘಟಕಗಳ ಲೈಸೆನ್ಸಿಂಗ್
ಹಾಗೂ ನಿಯಂತ್ರಣ ಪ್ರಾಧಿಕಾರ
ಚಿಕ್ಕಬಳ್ಳಾಪುರ ಜಿಲ್ಲೆ

PR-1129

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH